| | SRI DEVARAJ URS ACADEMY OF HIGHER EDUCATION AND RESEARCH<br>TAMAKA, KOLAR | |
|---|---|---|
| SDUAHER | NATIONAL SERVICE SCHEME (NSS) | |

# ವಿಶ್ವ ಪರಿಸರ ದಿನಾಚರಣೆ (06.06.2017) :

ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ 06/06/2017, ಮಂಗಳವಾರದಂದು ವಿವಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಪೂರ್ವಭಾವಿಯಾಗಿ ಡಾ॥ ಜಯಂತಿ. ಡಿ. ಅವರ ಸಹಯೋಗದೊಂದಿಗೆ 1000 ಸಸಿಗಳನ್ನು ಮತ್ತು ವಿವಿದ ಬಗೆಯ ಬೀಜಗಳನ್ನು ಶೇಕರಣೆ ಮಾಡಲಾಯಿತು.

ವಿಶ್ವ ಪರಿಸರ ದಿನದಂದು ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಜಿ. ಎಚ್. ನಾಗರಾಜ, ಉಪಾಧ್ಯಕ್ಷರು ಶ್ರೀ. ರಾಜೇಶ .ಎನ್. ಜಗದಾಳೆ, ಕುಲಾಧಿಪತಿಗಳಾದ ಡಾ॥ ಎಸ್. ಕುಮಾರ್, ಕುಲಪತಿಗಳಾದ ಡಾ॥ ಸಿ.ವ್ವಿ. ರಘುವೀರ್, ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ॥ ಹರೇಂದ್ರಕುಮಾರ ಮತ್ತು ವಿವಿದ ವಿಭಾಗಗಳ ಮುಖ್ಯಸ್ಥರು ಶ್ರೀಗಂಧದ ಸಸಿಗಳನ್ನು ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕುಲಾಧಿಪತಿಗಳಾದ ಡಾ॥ ಎಸ್. ಕುಮಾರ್, ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎನ್.ಎಸ್.ಎಸ್. ಸ್ವಯಂ ಸೇವಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದನೆ ನಡೆಸಿ ಪರಿಸರದ ಸಂರಕ್ಷಣೆ ಹಾಗೂ ಪೋಷಣೆಗಾಗಿ ಸ್ವಲ್ಪ ಸಮಯವನ್ನು ಮೀಸಲಿಡಲು ಕಿವಿಮಾತು ಹೇಳಿದರು.

ನಂತರ ಆರ್.ಎಲ್.ಜಾಲಪ್ಪ ಶಾಲಾ ವಿದ್ಯಾರ್ಥಿಗಳು, ವೈದ್ಯಕೀಯ ಹಾಗೂ ಅರೆವೈದ್ಯಕೀಯ ಮಹಾವಿದ್ಯಾಲಯದ ಸುಮಾರು 400 ವಿದ್ಯಾರ್ಥಿಗಳು ಬೀಜಯುಕ್ತ ಮಣ್ಣಿನ ಉಂಡೆ (Seed ball) ಮಾಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸುಮಾರು 10,000 ಬೀಜಯುಕ್ತ ಮಣ್ಣಿನ ಉಂಡೆಗಳನ್ನು ಮಾಡಿದರು. ಡಾ॥ಕುಮಾರಸ್ವಾಮಿ ಎನ್.ಎಸ್.ಎಸ್. ಸಂಯೋಜನಾಧಿಕಾರಿ ಹಾಗೂ ಡಾ॥

ಜಯಂತಿ (ಬೀಜ ಮತ್ತು ಸಸಿಗಳ ಪ್ರಾಯೋಜಕರು) ಕಾರ್ಯಕ್ರಮವನ್ನು ಸಂಯೋಜಿಸಿ ಸಮರ್ಪಕವಾಗಿ ಯಶಸ್ವಿಗೊಳಿಸಿದರು.






























National Service Scheme
Programme Co-ordinator
Sri Devaraj Urs Academy of
Higher Education and Research
Tamaka, Kolar